ಪ್ರಾರ್ಥನೆ ಏಕೆ ಮಾಡುತ್ತಿರುವೆ?' ಎಂದು ಪ್ರಶ್ನಿಸಿದಳು. ಆಗ ರಾಮಣ್ಣ ಭಕ್ತಿಯಿಂದ ನಿದ್ರಾದೇವಿಗೆ ಕೈ ಮುಗಿದು, ತನ್ನ ಕಷ್ಟವನ್ನೆಲ್ಲ ಹೇಳಿಕೊಂಡು, ತನ್ನ ಸಮಸ್ಯೆಯನ್ನು ಪರಿಹರಿಸುವಂತೆ ಬೇಡಿಕೊಂಡ. ನಿದ್ರಾದೇವಿ ನಸುನಗುತ್ತಾ 'ರಾಮಣ್ಣ, ನಿನ್ನ ಸಮಸ್ಯೆಗೆ ನಿನ್ನ ಕೆಲಸವೇ ಕಾರಣ' ಎಂದಳು. ರಾಮಣ್ಣನಿಗೆ ಆಶ್ಚರ್ಯವಾಯಿತು. 'ನಾನು ಮಾಡುತ್ತಿರುವ ಕೆಲಸದಿಂದ ನನಗೆ ಸಾಕಷ್ಟು ದೇಹಾಯಾಸ, ಹಸಿವು ಆಗುತ್ತಿದೆ. ಹೊಟ್ಟೆ ತುಂಬ ಉಂಡು ಮಲಗಿದರೂ ನಿದ್ದೆ ಬರುತ್ತಿಲ್ಲ. ಇದಕ್ಕೆ ನನ್ನ ಕೆಲಸವೇ ಕಾರಣ ಹೇಗೆ ತಾಯಿ?' ಎಂದು ರಾಮಣ್ಣ ನಿದ್ರಾದೇವಿಯನ್ನು ಕೇಳಿದ. ಆಗ ನಿದ್ರಾದೇವಿ 'ನೀನು ಮಾಡುತ್ತಿರುವ ಕೆಲಸ ಕಷ್ಟಕರ ಹಾಗೂ ಆಯಾಸಕರವೇನೋ ಸರಿ. ಆದರೆ ನೀನು ಪ್ರತಿ ದಿನ ಮರಗಳನ್ನು ಕಡಿಯುತ್ತಿರುವೆ. ಇದರಿಂದ ಕಾಡು ನಾಶವಾಗುತ್ತಿದೆ. ಪ್ರಕೃತಿಗೆ ಹಾನಿಯಾಗುತ್ತಿದೆ. ಕಾಡಿನಲ್ಲಿ ವಾಸಿಸುತ್ತಿರುವ ಹಲವಾರು ಜೀವಿಗಳಿಗೆ ಇದರಿಂದ ತೊಂದರೆಯಾಗುತ್ತಿದೆ. ಕಾಡಿನ ಜೀವಿಗಳಿಗೇ ಏನು, ನಾಡಿನ ಜನರಿಗೂ ಇದರಿಂದ ಅಪಾಯವೇ. ಅರಣ್ಯ ನಾಶದಿಂದ, ಪರಿಸರಕ್ಕೆ ಹಾನಿಯಾಗಿ ಮಳೆ, ಬೆಳೆಗೆ ಧಕ್ಕೆಯಾಗಿ, ಭೂಮಿಯ ತಾಪಮಾನ ಹೆಚ್ಚಾಗಿ ಪ್ರಕೃತಿಯ ಸಮತೋಲನದಲ್ಲಿ ಏರುಪೇರಾಗುತ್ತದೆ. ಮರ ಕಡಿಯುವ ಕೆಲಸ ಬಿಟ್ಟು ಬೇರಾವುದಾದರೂ ಉದ್ಯೋಗ ಮಾಡು. ನಿನ್ನ ಸಮಸ್ಯೆ ಪರಿಹಾರವಾಗುವುದು' ಎಂದು ಹೇಳಿ ಮಾಯವಾದಳು.

ರಾಮಣ್ಣನಿಗೆ ಎಚ್ಚರವಾಯಿತು. ಕೂಡಲೆ ಹೆಂಡತಿಯನ್ನು ಎಬ್ಬಿಸಿ ಅವಳಿಗೆ ತನ್ನ ಕನಸಿನ ಬಗ್ಗೆ ಹೇಳಿದ. ಅವಳಿಗೂ ಇದನ್ನು ಕೇಳಿ ಆಶ್ಚರ್ಯವಾದರೂ, ನಿಜ ಎನಿಸಿತು. ರಾಮಣ್ಣ ಮರ ಕಡಿಯುವ ಕೆಲಸ ಬಿಟ್ಟುಬಿಡಲು ತೀರ್ಮಾನಿಸಿದ. ಹೆಂಡತಿಯೂ ಇದಕ್ಕೆ ಸಹಮತ ವ್ಯಕ್ತಪಡಿಸಿದಳು. ತನ್ನ ಮನೆಯ ಸುತ್ತಮುತ್ತ ಇದ್ದ ತನ್ನದೇ ಜಾಗದಲ್ಲಿ ಕೃಷಿ ಮಾಡಲು ನಿರ್ಧರಿಸಿದ.

ಮರ ಕಡಿಯುವುದನ್ನು ನಿಲ್ಲಿಸಿ, ಕೃಷಿಯಲ್ಲಿ ತೊಡಗಿಕೊಂಡ ಮೇಲೆ ಅವನ ನಿದ್ರಾಹೀನತೆ ಮಾಯವಾಯಿತು. ಮೊದಮೊದಲು ಜೀವನ ಸಾಗಿಸುವುದು ಕಷ್ಟವೆನಿಸಿದರೂ ಕ್ರಮೇಣ ಕೃಷಿ ಅವನ ಕೈಹಿಡಿಯಿತು. ಜೀವನ ನೆಮ್ಮದಿಯಿಂದ ಸಾಗತೊಡಗಿತು. ■



# ಮೊಬೈಲು ಭೂತ

■ ನರಸಿಂಹಾರೆಡ್ಡಿ ಯಂಕಾಮೋಳ

ಕಲೆ: ಸಂತೋಷ್ ಸಸಿಹಿತ್ಲು

ಅಂಗೈ ಅಗಲದ
ಮೊಬೈಲು ಭೂತ
ಕಸಿದಿದೆ ಮಕ್ಕಳ
ಬಾಲ್ಯದ ಆಟ

ಮುಕ್ತಮನಸಿನಲಿ
ಯೋಚಿಸಲು ಬಿಡದೆ
ತೋರಿದೆ ತನ್ನದೇ
ಮಾಯೆಯ ಮಾಟ

ಆಟವ ತಡೆದಿದೆ
ಪಾಠವ ಮರೆಸಿದೆ
ಇವರನು ತನಗೆ
ಅಂಟಿಸಿ ಕೂರಿಸಿದೆ

ಎಲ್ಲರ ಕೈಯಲಿ
ಮೊಬೈಲು ಮಾತ್ರ
ಸಮಯ ಕಳೆಯಲು
ಅದೊಂದೇ ಸೂತ್ರ

ಹೆಚ್ಚಾಗದಿರಲಿ ಈ
ಮೊಬೈಲು ಗೀಳು
ಮುಗ್ಧ ಮನಸುಗಳ
ಕನಸುಗಳು ಹಾಳು

ಗಮನವನ್ನು ಇಡಿ
ಪುಸ್ತಕದಲ್ಲಿ
ಜ್ಞಾನಾರ್ಜನೆ ನೋಡಿ
ಮಸ್ತಕದಲ್ಲಿ

## ಕುಂಚ ಪ್ರಪಂಚ





**ವೈಷ್ಣವಿ ಕೆ.ಎಚ್.**
2ನೇ ತರಗತಿ, ದಿ ಅಮಾತ್ರ ಅಕಾಡೆಮಿ, ಬೆಂಗಳೂರು

ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಎಳೆಯರು ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:**
editorsu@sudha.co.in